2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**118/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವಿಲ್ಸನ್ | ಪಿಡಬ್ಲೂ - 6 |
| ತಂದೆಯ ಹೆಸರು | - | Xevior | ಸಿಡಬ್ಲೂ - 10 |
| ವಯಸ್ಸು | - | 36 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಸಿಂಸೆ, ಎನ್.ಆರ್. ಪುರ | |

ದಿನಾಂಕಃ 04-07-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ಪಿರ್ಯಾದಿ ಪ್ರಸೀದ್ ಗೊತ್ತು. ಅಂದಾಜು 4 ವರ್ಷಗಳ ಹಿಂದೆ ನನ್ನನ್ನು ಮತ್ತು ಚಂದ್ರಾ ಇವರನ್ನು ಪೊಲೀಸರು ಎನ್.ಆರ್. ಪುರ ಠಾಣೆಗೆ ಕರೆಸಿಕೊಂಡಿದ್ದು, ಅಲ್ಲಿ ಪಿರ್ಯಾದಿ ಪ್ರಸೀದ್ ರವರು ಒಂದು ಶರ್ಟು, ಚೂಡಿಧಾರ ಒಟ್ಟು 3 ಬಟ್ಟೆಗಳನ್ನು ಪೊಲೀಸರ ಮುಂದೆ ಹಾಜರು ಪಡಿಸಿದರು. ಸದರಿ ಪಿರ್ಯಾದಿ ಪ್ರಸೀದ್ ರವರ ಮನೆಯಲ್ಲಿ ರಾಬರಿಯಾಗಿತ್ತು ಮತ್ತು ಅವರಿಗೆ ಹಲ್ಲೆ ಮಾಡಿದ್ದರಿಂದ ಅವರ ಬಟ್ಟೆಗಳು ರಕ್ತದ ಕಲೆಯಾಗಿರುತ್ತವೆ. ಸದರಿ ಬಟ್ಟೆಗಳನ್ನೇ ಪೊಲೀಸರ ಮುಂದೆ ಹಾಜರು ಪಡಿಸಿರುತ್ತಾರೆ. ಪೊಲೀಸರು ಸದರಿ ಪಿರ್ಯಾದಿ ಪ್ರಸೀದ್ ರವರು ನೀಡಿದ ಬಟ್ಟೆಗಳನ್ನು ನಮ್ಮ ಮುಂದೆ ವಶಪಡಿಸಿಕೊಂಡಿದ್ದರ ಕುರಿತು ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಅಮಾನತ್ತು ಮಹಜರ್ ನ್ನು ಈಗ

ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ.4 ಎಂದು ಗುರುತಿಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಬಟ್ಟೆಗಳನ್ನು ನನಗೆ ತೋರಿಸಿದರೆ ಗುರುತು ಹಿಡಿಯುತ್ತೇನೆ. ಈಗ ತೋರಿಸಿದ ಒಂದು ಶರ್ಟು, ಪಂಚೆ ಮತ್ತು ಚೂಡಿಧಾರ ಇವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.2 ರಿಂದ 4 ಎಂದು ಗುರುತಿಸಲಾಗಿರುತ್ತದೆ. ಸದರಿ ಮು.ಮಾ.2 ರಿಂದ 4 ಗಳನ್ನು ನಿ.ಪಿ.4 ರಡಿಯಲ್ಲಿ ಅಮಾನತ್ತು ಪಡಿಸಿಕೊಳ್ಳಲಾಗಿರುತ್ತದೆ.

(1 ನೇ ಆರೋಪಿಯು ಗೈರು ಹಾಜರಾಗಿದ್ದು ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಅವರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಹೇಳಿರುತ್ತಾರೆ. )

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – 6 ನೇ ಆರೋಪಿತರ ಪರವಾಗಿ</u>

2. ನನಗೆ ಪಿರ್ಯಾದಿ ಪ್ರಸೀದ್ ಸುಮಾರು 6-7 ವರ್ಷದಿಂದ ಪರಿಚಯವಿದ್ದು ನಾವು ಅವರು ಅಕ್ಕ ಪಕ್ಕದ ಜಾಗದವರಾಗಿರುತ್ತೇವೆ. ಎನ್.ಆರ್. ಪುರ ಪೊಲೀಸ್ ಠಾಣೆಯಲ್ಲಿ ಪರಿಚಯಸ್ಥರು ನೆಂಟರು ಯಾರು ಇರುವುದಿಲ್ಲ. ನನಗೆ ಪ್ರಸೀದ್ ರವರ ಹೆಂಡತಿ ಠಾಣೆಗೆ ಬರಲು ಹೇಳಿದ್ದರು. ನಾನು ಪ್ರಸೀದ್ ಠಾಣೆ ಒಟ್ಟಿಗೆ ಹೋಗಿರಲಿಲ್ಲ. ಸದರಿ ಮು.ಮಾ.2 ರಿಂದ 4 ಬಟ್ಟೆಗಳು ಆ ದಿನ ಠಾಣೆಯಲ್ಲಿ ಯಾರ ಹತ್ತಿರ ಇದ್ದವು ಎಂಬುದು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಬಟ್ಟೆಗಳನ್ನು ನನಗೆ ಆ ದಿನ

ಪೊಲೀಸರು ತೋರಿಸಿರುತ್ತಾರೆ. ಆದರೆ ಅವುಗಳ ಮೇಲೆ ಎಲ್ಲೆಲ್ಲಿ ರಕ್ತದ ಕಲೆಯಾಗಿತ್ತು ಎಂಬುದರ ಬಗ್ಗೆ ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಬಟ್ಟೆಗಳ ಮೇಲೆ ವಿಶೇಷ ಗುರುತುಗಳು ಆಗಿದ್ದರ ಬಗ್ಗೆ ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಅಮಾನತ್ತು ಮಹಜರ್ ನಲ್ಲಿ ಪೊಲೀಸರು ಏನು ವಿಷಯ ಬರೆದುಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನನಗೆ ಠಾಣೆಯಲ್ಲಿ ಮು.ಮಾ.2 ರಿಂದ 4 ಇವುಗಳನ್ನು ಅಮಾನತ್ತು ಪಡಿಸಿಕೊಂಡಿದ್ದ ಬಗ್ಗೆ ಏನು ಗೊತ್ತಿರುವುದಿಲ್ಲ, ಪಿರ್ಯಾದಿ ಪ್ರಸೀದ್ ಹೇಳಿದ್ದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಹೆಚ್.ಎ.ಟಿ. ವಕೀಲರಿಂದ – 1 ರಿಂದ 5 ನೇ ಆರೋಪಿತರ ಪರವಾಗಿ

3. 6 ನೇ ಆರೋಪಿತನ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು. .

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಮಾಃ